**OS.No.**1/2016 **DW**-2

**ದಿನಾಂಕಃ 18.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ. ಆರ್.ಡಿ.ಆರ್. ವಕೀಲರಿಂದಃ**

ಯಾವ ಸರ್ವೆ ನಂಬರ್ ನಲ್ಲಿ ರೇಣುಕಾರಾಧ್ಯರವರು ಅನ್ಯಸಂಕ್ರಮಣ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ಹಳ್ಳಿಮೈಸೂರು ಗ್ರಾಮದ ಸ.ನಂ.43/2 ರಲ್ಲಿ ಅನ್ಯಸಂಕ್ರಮಣ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ಈ ಸರ್ವೆ ನಂಬರ್ ನಲ್ಲಿ 4 ಗುಂಟೆ ಜಮೀನನ್ನು ಅನ್ಯ ಸಂಕ್ರಮಣ ಮಾಡಿಸಿರುತ್ತಾರೆ. 1995-96 ರಿಂದ 2005 ರವರಗೆ ಅಡವಿಶಾರಾಧ್ಯ ಹಾಗೂ ಷಣ್ಮುಖಶೆಟ್ಟಿರವರು ಭಾರತ್ ಯೂನಿವರ್ಸಲ್ ಎಜುಕೇಶನ್ ಸೊಸೈಟಿಯ ಮೇಲೆ ಎಷ್ಟು ಪ್ರಕರಣಗಳನ್ನು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ಪ್ರಕರಣಗಳನ್ನು ಸಲ್ಲಿಸಿರುತ್ತಾರೆ, ಆದರೆ ಎಷ್ಟು ಎಂದು ನನಗೆ ನೆನಪಿಗೆ ಬರುತ್ತಿಲ್ಲ ಎಂದು ನುಡಿಯುತ್ತಾರೆ. ಪ್ರಕರಣದ ದಾಖಲಸಿದ್ದರ ಸಂಬಂಧ ನಾನು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ಬೆಂಗಳೂರಿನ ಸಿಟಿ ಸಿವಿಲ್ ಕೋರ್ಟ್ ಮುಂದೆ ಅಸಲು ದಾವೆ ನಂ.7907/2003 ದಾವೆಗೆ ಸಂಬಧಪಟ್ಟಂತೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಅಸಲು ದಾವೆ ನಂ.7907/2003 ದಾವೆಯು ಚಾಲ್ತಿ ಇದೆಯಾ ಅಥವಾ ಮುಕ್ತಾಯವಾಗಿದೆಯಾ ಎಂದರೆ ಸಾಕ್ಷಿ ಮುಕ್ತಾಯವಾಗಿದೆ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಅಸಲು ದಾವೆ ನಂದಿ.7907/2003 ಚಾಲ್ತಿಯಲ್ಲಿದೆ ಎಂದು ಬರೆಸಿರುವ ವಿಷಯ ನಿಜವಾ ಅಥವಾ ಸುಳ್ಳಾ ಎಂದರೆ ಸಾಕ್ಷಿ ಪೆಂಡಿಂಗ್ ಇದೆ ಎಂದು ನಾನು ಹೇಳಿ ಬರೆಸಿದ್ದೆ, ಬರೆದಿರುತ್ತಾರೆ ಎಂದು

ನುಡಿಯುತ್ತಾರೆ. ಅಸಲು ದಾವೆ ನಂ.7907/2003 ರ ದಾವೆಯು 2017 ರಲ್ಲಿ ವಜಾ ಆಗಿದ್ದರೂ ಸಹಾ ನನ್ನ ಮುಖ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸದರಿ ದಾವೆ ಚಾಲ್ತಿಯಲ್ಲಿದೆ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸಾಕ್ಷಿ ವಜಾ ಆಗಿದೆ ಎಂದು ನನ್ನ ಗಂಡ ಹೇಳುತ್ತಿದ್ದರು, ಆದರೆ ನನಗೆ ಸರಿಯಾಗಿ ಗೊತ್ತಾಗಲಿಲ್ಲಎಂದು ನುಡಿಯುತ್ತಾರೆ.

ಮಾತೃಶ್ರೀ ವಿದ್ಯಾಸಂಸ್ದೆಯ ವರ್ಗಾವಣೆ ಕೋರಿ ಸಲ್ಲಿಸಿದ್ದ ಮನವಿ ಯಾವ ದಿನಾಂಕದದು ತಿರಸ್ಕಾರವಾಗಿರುತ್ತದೆ ಎಂದರೆ 1993-94 ನೇ ಸಾಲಿನಲ್ಲಿ ತಿರಸ್ಕಾರವಾಗಿರುತ್ತದೆ, ನಿಖರವಾದ ದಿನಾಂಕ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತಿರಸ್ಕಾರವಾದ ಆದೇಶವನ್ನು ನಾನು ಓದಿರುತ್ತೇನೆ. ತಿರಸ್ಕಾರವಾದ ಆದೇಶದ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಮಾತೃಶ್ರೀ ವಿದ್ಯಾಸಂಸ್ದೆಯ ವರ್ಗಾವಣೆ ಕೋರಿ ಸಲ್ಲಿದ್ದ ಮನವಿ ತಿರಸ್ಕಾರಗೊಡಂ ನಂತರ ಸದರಿ ಸಂಸ್ಥೆಯಲ್ಲಿದ್ದ ಕಾರ್ಯಕಾರಿಣಿ ಮಂಡಳಿಯ ಸದಸ್ಯರನ್ನು ಭಾರತ್ ಯೂನಿವರ್ಸಲ್ ಸೊಸೈಟಿಗೆ ಸೇರಿಸಿಕೊಂಡಿರುತ್ತೇವೆ ಎಂದು ನಿಮ್ಮ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ್ದು, ಯಾವ ದಿನಾಂಕದಂದು ಸೇರಿಸಿಕೊಂಡಿರುತ್ತೀರಿ ಎಂದರೆ ಸಾಕ್ಷಿ 1995-96 ನೇ ಸಾಲಿನಲ್ಲಿ ಸೇರಿಸಿಸಿಕೊಂಡಿದ್ದು, ನಿಖರವಾದ ದಿನಾಂಕ ಮತ್ತು ತಿಂಗಳು ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಈ ಸಂಬಂಧ ಠರಾವಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

ಶೆಡ್ಯೂಲ್ ಸ್ವತ್ತುಗಳಲ್ಲಿ ಶಂಭುಲಿಂಗಪ್ಪರವರೇ ಸುಸರ್ಜಿತವಾದ ಶಾಲಾ ಕಟ್ಟಡ ಗಳನ್ನು ನಿರ್ಮಾಣ ಮಾಡಿರುತ್ತಾರೆ ಎಂದು ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು, ಆದರೆ ಈ ಪ್ರಕರಣದಲ್ಲಿ ಹೇಳಿರುವ ಶೆಡ್ಯೂಲ್ ಸ್ವತ್ತುಗಳು ಯಾವುವು ಎಂದರೆ  ಸಾಕ್ಷಿ ಹಳ್ಳಿಮೈಸೂರು ಸ.ನಂ.43/2 ರಲ್ಲಿ 2 ಎಕರೆ ಹಾಗೂ 43/1 ರಲ್ಲಿಯ 10 ಗುಂಟೆ ಆಸ್ತಿ ಈ ಪ್ರಕರಣಲ್ಲಿಯ ಶೆಡ್ಯೂಲ್ ಸ್ವತ್ತುಗಳು ಎಂದು ನುಡಿಯುತ್ತಾರೆ. ಸುಸರ್ಜ್ಜಿತವಾದ ಕಟ್ಟಡ ಕಟ್ಟಲು ಕಟ್ಟಡ ಪರವಾನಿಗೆಯನ್ನು ಮತ್ತು ಅಪ್ರೂಡ್ ಪ್ಲಾನ್ ಅನ್ನು ಪಡೆದಿರುತ್ತಾರಾ ಎಂದರೆ ಸಾಕ್ಷಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಪರವಾನಿಗೆ ಮತ್ತು ಪ್ಲಾನ್ ಅನ್ನು 1997-98ನೇ ಸಾಲಿನಲ್ಲಿ ಪಡೆದಿರುತ್ತಾರೆ. ಶಂಭುಲಿಂಗಪ್ಪರವರೇ ಕಟ್ಟಡವನ್ನು ನಿರ್ಮಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ಅನ್ಯ ಸಂಕ್ರಮಣ ದಿಃ 08.12.1999 ರಂದು ಆಗಿರುತ್ತದೆ. ಈ ಸಂಬಂಧ ದಾಖಲಾತಿಗಳನ್ನು ನಾನು ನೋಡಿರುತ್ತೇನೆ, ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿಃ 08.12.1999 ರಂದು ಅನ್ಯ ಸಂಕ್ರಮಣ ಮಾಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅನ್ಯಸಂಕ್ರಮಣವಾದ ನಂತರ 2001ನೇ ಇವಿಯಲ್ಲಿ ಪಂಚಾಯಿತಿಯಲ್ಲಿ ಖಾತೆಯಾಗಿರುತ್ತದೆ. ಖಾತೆಯಾಗಿದ್ದರ ಸಂಬಂಧ ದಾಖಲಾತಿಗಳನ್ನು  ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. 2001ನೇ ಇಸವಿಯಲ್ಲಿ  ಖಾತೆಯು ಸಂಸ್ಥೆಯ ಹೆಸರಿಗೆ ಆಗಿರುತ್ತದೆ.

ಖಾತೆಯಾಗಿದ್ದರ ಸಂಬಂದ ಯಾವುದೇ ದಾಖಲಾತಿಗಳು ಇರದೇ ಇದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರೇಣುಕಾರಾಧ್ಯ ರವರದ್ದು ಈ ಸಂಸ್ಥೆಯಲ್ಲಿ ಯಾವುದೇ ಪಾತ್ರ ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರೇಣುಕಾರಾಧ್ಯರವರು ಸಂಬಂಧಿಕರಾಗಿದ್ದರಿಂದ ಅವರ ಹೆಸರಿಗೆ ಕ್ರಯಪತ್ರ ಮಾಡಿಸಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ಗುಂಟೆ ಆಸ್ತಿಗೆ ಸಂಬಧಪಟ್ಟಂತೆ ಕ್ರಯಪತ್ರವು ದಿಃ 15.10.1998 ರಂದು ಆಗಿರುತ್ತದೆ. ಈ ಕ್ರಯಪತ್ರವನ್ನು ರೇಣುಕಾರಾಧ್ಯರವರು ಶಂಭುಲಿಂಗಪ್ಪ ಮತ್ತು ಮಂಜುನಾಥ್ ರವರ ಹೆಸರಿಗೆ ಮಾಡಿಕೊಟ್ಟಿರುತ್ತಾರೆ. ಮಾರಾಟದ ನಿಷ್ಕರ್ಶವೂ 50 ಸಾವಿರ ರೂ.ಗಳಿಗೆ ಆಗಿತ್ತು. ಒಂದು ವೇಳೆ ಹಣವನ್ನು ಪಾವತಿಸುವ ಹಾಗೆ ಇರಲಿಲ್ಲ ಎಂದರೆ ದಾನಪತ್ರ ಮಾಡಿಸಿಕೊಳ್ಳಬಹುದಾಗಿತ್ತು ಎಂದರೆ ಹೌದು. ಸಾಕ್ಷಿ ಮುಂದುವರೆದು ಸಂಸ್ಥೆಯ ಹೆಸರಿಗೆ ಆಗಿರುವುದರಿಂದ ದಾನಪತ್ರ ಮಾಡಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಕೆ ವಿ ಶಂಭುಲಿಂಗಪ್ಪ ಮತ್ತು ಕೆ ವಿ ಮಂಜುನಾಥ್ ರವರ ಹೆಸರಿಗೆ 4 ಗುಂಟೆ ಆಸ್ತಿ ಕ್ರಯವಾಗುವ ದಿನ ಸದರಿ ಆಸ್ತಿ ಯಾರ ಹೆಸರಿನಲ್ಲಿತ್ತು ಎಂದರೆ ಸಾಕ್ಷಿ ರೇಣುಕಾರಾಧ್ಯರವರ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ಕ್ರಯಪತ್ರ ಮಾಡುವ ದಿನ ಸದರಿ ಆಸ್ತಿ ಭಾರತ್ ಎಜುಕೇಶನ್ ಸೊಸೈಟಿಯ ಹೆಸರಿನಲ್ಲಿಯಾಗಲೀ ಅಥವಾ ಮಾತೃಶ್ರೀ ಸಂಸ್ದೆಯ ಹೆಸರಿನಲ್ಲಿಯಾಗಲೀ ಇರಲಿಲ್ಲ ಎಂದರೆ ಸಾಕ್ಷಿ ರೇಣುಕಾರಾಧ್ಯ ರವರನ್ನು ಸಂಸ್ದೆಗೆ ಉಪಾಧ್ಯಕ್ಷರನ್ನಾಗಿ ಮಾಡಿದ್ದರಿಂದ ಕ್ರಯಪತ್ರವನ್ನು ಅವರ ಹೆಸರಿಗೆ ಮಾಡಿದ್ದರು ಎಂದು ನುಡಿಯುತ್ತಾರೆ. ರೇಣುಕಾರಾಧ್ಯರವರು ಭಾರತ್ ಯೂನಿವರ್ಸಲ್ ಎಜುಕೇಶನ್ ಸೊಸೈಟಿಗೆ 1998-99ನೇ ಸಾಲಿನಿಂದಲೂ

ಉಪಾಧ್ಯಕ್ಷರಾಗಿದ್ದರು. ನಾನು ಕ್ರಯಪತ್ರಗಳನ್ನು ಓದಿದ್ದೇನೆ. ರೇಣುಕಾರಾಧ್ಯರವರು ಭಾರತ್ ಯೂನಿವರ್ಸಲ್ ಎಜುಕೇಶನ್ ಸೊಸೈಟಿಯ ಉಪಾಧ್ಯಕ್ಷರಾಗಿದ್ದರಿಂದಲೇ ಸದರಿಯವರ ಹೆಸರಿಗೆ ಆಸ್ತಿಯ ಕ್ರಯಪತ್ರವನ್ನು ಮಾಡಿರುತ್ತೇವೆ ಎನ್ನುವ ಬಗ್ಗೆ ಕ್ರಯಪತ್ರದಲ್ಲಿ ಉಲ್ಲೇಖವಿದೆಯಾ ಎಂರದೆ ಸಾಕ್ಷಿ ಅದನ್ನು ನಾನು ನೋಡಿಲ್ಲ ಎಂದು ನುಡಿಯುತ್ತಾರೆ.

ದಿನಾಂಕಃ 08.12.1999 ರಂದು ಜನರಲ್ ಪವರ್ ಆಫ್ ಅಟಾರ್ನಿಯಾಗಿರುತ್ತದೆ. ಅದನ್ನು ರೇಣಕಾರಾಧ್ಯರವರು ಕೆ.ವಿ.ಶಂಭುಲಿಂಗಪ್ಪ ಮತ್ತು ಮಂಜುನಾಥ್ ರವರಿಗೆ ಬರೆದುಕೊಟ್ಟಿರುತ್ತಾರೆ. ಜಿಪಿಎ ಸಂಪೂರ್ಣ ಸ್ವತ್ತಿಗಾಗಿ ಬರೆದುಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾರ್ಯಕಾರಿಣಿ ಮಂಡಳಿಯ ತೀರ್ಮಾನದ ಮೇರೆಗೆ ಜಿಪಿಎ ಬರೆದುಕೊಟ್ಟಿರುತ್ತಾರೆ ಎಂದು ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿದ್ದು, ಸದರಿ ಕಾರ್ಯಕಾರಿಣಿ ಮಂಡಳಿಯ ತೀರ್ಮಾನ ಯಾವ ದಿನಾಂಕದಂದು ಆಗಿರುತ್ತದೆ ಎಂದರೆ ಸಾಕ್ಷಿ 1997-98ನೇ ಇಸವಿಯಲ್ಲಿ ಆಗಿದ್ದು, ನಿಖರವಾದ ದಿನಾಂಕ ಮತ್ತು ತಿಂಗಳು ಹೇಳಲು ರುವುದಿಲ್ಲ ಎಂದು ನುಡಿಯುತ್ತಾರೆ. ಈ ಸಂಬಂಧ ರೆಸಲೂಶನ್ ನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜುರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ 5ನೇ ಪುಟದಲ್ಲಿ ಶಿಕ್ಷಣ ಸಂಸ್ಥೆಯನ್ನು ಸ್ಥಳಾಂತರಿಸಿರುತ್ತಾರೆ ಎಂದು ಹೇಳಿದ್ದು, ಎಲ್ಲಿಂದ ಎಲ್ಲಿಗೆ ಸ್ಥಳಾಂತರಿಸಲಾಗಿದೆ ಎಂದರೆ ಸಾಕ್ಷಿ 1972 ರಿಂದ ಭಾರತ್ ಯೂನಿವರ್ಸಲ್ ಎಜುಕೇಶನ್ ಸೊಸೈಟಿಯು 1977 ರವರಗೆ ನಡೆದಿದ್ದು, ಕಾರಣಾಂತರಗಳಿಂದ ಅದನ್ನು

ಹಳ್ಳಿಮೈಸೂರಿಗ ಸ್ಥಳಾಂತರಿಸಲಾಗಿದೆ ಎಂದು ನುಡಿಯುತ್ತಾರೆ. 1993-94ನೇ ಸಾಲಿನಲ್ಲಿ ಸಂಸ್ಥೆಯು ಸ್ಥಳಾಂತರವಾಗಿರುತ್ತದೆ. ಸ್ಥಳಾಂತರಕ್ಕೆ ಸಂಬಂದಪಟ್ಟಂತೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಇದೆ.

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.